# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1007 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14.12.2023 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲಿ ವಿವಿಧ ವರ್ಗದ ನೋಂದಾಯಿತ ವಾಹನಗಳ ಸಂಖ್ಯೆ ಎಷ್ಟು; ವರ್ಗವಾರು ಮತ್ತು ನೋಂದಾಯಿತ ವರ್ಷ ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು;</td><td>ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲಿ ಟ್ರಾಫಿಕ್ ಸಮಸ್ಯೆ ಉಲ್ಬಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಗರದಲ್ಲಿ ಟ್ರಾಫಿಕ್ ಸಮಸ್ಯೆಯನ್ನು ಎದುರಿಸುತ್ತಿರುವ ಜಂಕ್ಷನ್‌ಗಳು ಯಾವುವು; ಮತ್ತು ಇವುಗಳ ಸುಧಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)</td><td>ಬಂದಿರುತ್ತದೆ.<br>ಬೆಂಗಳೂರು ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಯನ್ನು ಆಧರಿಸಿ, ಸಂಚಾರ ದಟ್ಟಣೆಯ ರಸ್ತೆಗಳು ಹಾಗೂ ಜಂಕ್ಷನ್‌ಗಳನ್ನು ಗುರುತಿಸಲಾಗಿದ್ದು, ಅವುಗಳ ವಿವರ ಈ ಕೆಳಕಂಡಂತಿರುತ್ತದೆ.<br><br><u>ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳ ಗುರುತಿಸುವಿಕೆ :</u><br>ಬೆಂಗಳೂರು ನಗರದಲ್ಲಿ ವಾಹನಗಳ ಸಂಚಾರ ದಟ್ಟಣೆಯ ಆಧಾರದ ಮೇಲೆ ಒಟ್ಟು 12 ರಸ್ತೆಗಳನ್ನು ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳಾನ್ನಾಗಿ ಗುರುತಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.
<table>
<tr><td>1.</td><td>ಬಳ್ಳಾರಿ ರಸ್ತೆ</td><td>–</td><td><u>ಚಾಲುಕ್ಯ ವೃತ್ತದಿಂದ ಹೆಬ್ಬಾಳದವರೆಗೆ</u><br>– ವಿಂಡ್ಸರ್ ಮ್ಯಾನರ್ ಜಂಕ್ಷನ್ – ರಮಣ ಮಹರ್ಷಿ ರಸ್ತೆ – ಮೇಖ್ರಿ ವೃತ್ತದ ಮಾರ್ಗವಾಗಿ.</td></tr>
<tr><td>2</td><td>ಹಳೇ ಮದ್ರಾಸ್ ರಸ್ತೆ</td><td>–</td><td><u>ಟ್ರಿನಿಟಿ ವೃತ್ತದಿಂದ ಕೆ.ಆರ್. ಪುರಂ ವರೆಗೆ</u><br>ಹಲಸೂರು ಕೆರೆ – ಹಳೆ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ <u>ಹಾಗೂ ಕೆ.ಆರ್.ಪುರಂನಿಂದ ರಾಷ್ಟ್ರೀಯ ಹೆದ್ದಾರಿ 648 ವರೆಗೆ</u><br>ಹೂಡಿ – ಐಟಿಪಿಎಲ್ ಮತ್ತು ಹೋಪ್ ಫಾರಂ ಮಾರ್ಗವಾಗಿ</td></tr>
<tr><td>3</td><td>ಹಳೇ ಏರ್‌ಪೋರ್ಟ್ ರಸ್ತೆ</td><td>–</td><td><u>ಎ.ಎಸ್.ಸಿ ಸೆಂಟರ್ ನಿಂದ ಕಾಡುಗೋಡಿ ವರೆಗೆ</u><br>ದೊಮ್ಮಲೂರು – ಮಾರತ್‌ಹಳ್ಳಿ – ಕುಂದಲಹಳ್ಳಿ – ವರ್ತೂರು ಮತ್ತು</td></tr>
</table></td></tr>
</table>

| | | | | | |
|---|---|---|---|---|---|
| | | | | | ಹೋಪ್ ಫಾರಂ ಮಾರ್ಗವಾಗಿ |
| | | 4 | ಸರ್ಜಾಪುರ ರಸ್ತೆ | – | ಹೊಸೂರು ರಸ್ತೆ ಸೆಂಟ್ ಜಾನ್ಸ್ ಆಸ್ಪತ್ರೆಯಿಂದ ಬಿಬಿಎಂಪಿ ವ್ಯಾಪ್ತಿಯ ಕಾರ್ಮೆಲ್‌ರಾಂ ಬ್ರಿಡ್ಜ್‌ವರೆಗೆ<br>ಜಕ್ಕಸಂದ್ರ – ಇಬ್ಲೂರು – ಹರಳೂರು ಜಂಕ್ಷನ್ ಮಾರ್ಗವಾಗಿ |
| | | 5 | ಹೊಸೂರು ರಸ್ತೆ | – | ವೆಲ್ಲಾರ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್‌ವರೆಗೆ<br>ಆಡುಗೋಡಿ – ಫೋರಂ ಮಾಲ್ ಮತ್ತು ಮಡಿವಾಳ ಮಾರ್ಗವಾಗಿ |
| | | 6 | ಬನ್ನೇರುಘಟ್ಟ ರಸ್ತೆ | – | ಡೈರಿ ವೃತ್ತದಿಂದ ನೈಸ್ ರಸ್ತೆ ವರೆಗೆ<br>ಜಯದೇವ ಫ್ಲೈಓವರ್ – ಜೆ.ಡಿ. ಮರ ಜಂಕ್ಷನ್ – ಬಿಳೇಕಹಳ್ಳಿ – ಅರಕೆರೆ ಮತ್ತು ಗೊಟ್ಟಿಗೆರೆ ಮಾರ್ಗವಾಗಿ |
| | | 7 | ಕನಕಪುರ ರಸ್ತೆ | – | ಕೆ.ಆರ್. ರಸ್ತೆಯಿಂದ ನೈಸ್ ರಸ್ತೆವರೆಗೆ<br>ಬನಶಂಕರಿ – ಸಾರಕ್ಕಿ – ಕೋಣನಕುಂಟೆ ಮಾರ್ಗವಾಗಿ |
| | | 8 | ಮೈಸೂರು ರಸ್ತೆ | – | ಹಡ್ಸನ್ ವೃತ್ತದಿಂದ ನೈಸ್ ರಸ್ತೆವರೆಗೆ<br>ಟೌನ್‌ಹಾಲ್ – ಸ್ಯಾಟಲೈಟ್ ಟೌನ್ – ನಾಯಂಡಹಳ್ಳಿ – ಜ್ಞಾನಭಾರತಿ – ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ & ಕೆಂಗೇರಿ ಸ್ಯಾಟಿಲೈಟ್ ಟೌನ್ ಮಾರ್ಗವಾಗಿ |
| | | 9 | ಮಾಗಡಿ ರಸ್ತೆ | – | ಹಳೇ ಬಿನ್ನಿ ಮಿಲ್ ನಿಂದ ನೈಸ್ ರಸ್ತೆವರೆಗೆ<br>ಟೋಲ್‌ಗೇಟ್ ಜಂಕ್ಷನ್ – ಜೈಮುನಿರಾವ್ ವೃತ್ತ – ಹೌಸಿಂಗ್ ಬೋರ್ಡ್ – ಕಾಮಾಕ್ಷಿಪಾಳ್ಯ – ಹೊರವರ್ತುಲ ರಸ್ತೆ – ಶ್ರೀಗಂಧಕಾವಲ್ ಸುಂಕದಕಟ್ಟೆ ಮಾರ್ಗವಾಗಿ **ಹಾಗೂ**<br>ಅಂಜನನಗರ ಔಟರ್ ರಿಂಗ್ ರಸ್ತೆ – ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಮೈಸೂರು ರಸ್ತೆ ವರೆಗೆ<br>ಜಯದೇವ – ಜೆ.ಡಿ. ಮರ ಜಂಕ್ಷನ್ ಮಾರ್ಗವಾಗಿ |
| | | 10 | ತುಮಕೂರು ರಸ್ತೆ | – | ಓಕಳಿಪುರಂನಿಂದ ಗೊರಗುಂಟೆಪಾಳ್ಯವರೆಗೆ<br>ಡಾ: ರಾಜ್‌ಕುಮಾರ್ ರಸ್ತೆ – ಸೋಪ್ ಫ್ಯಾಕ್ಟರಿ ಜಂಕ್ಷನ್ ಮತ್ತು ಯಶವಂತಪುರ ಮಾರ್ಗವಾಗಿ |
| | | 11 | ವೆಸ್ಟ್ ಆಫ್ ಕಾರ್ಡ್ ರಸ್ತೆ | – | ಸೋಪ್ ಫ್ಯಾಕ್ಟರಿಯಿಂದ ಮೈಸೂರು ರಸ್ತೆವರೆಗೆ |

| | | | |
|---|---|---|---|
| | | | ಇಸ್ಕಾನ್ – ರಾಜಾಜಿನಗರ – ಟೋಲ್‌ಗೇಟ್ ಜಂಕ್ಷನ್, ವಿಜಯನಗರ ಮತ್ತು ದೀಪಾಂಜಲಿ ಮಾರ್ಗವಾಗಿ |
| 12 | ಹೊರ ವರ್ತುಲ ರಸ್ತೆ | – | **ತುಮಕೂರು ರಸ್ತೆಯಿಂದ ತುಮಕೂರು ರವರೆಗೆ**<br>ಹೆಬ್ಬಾಳ – ಕೆ.ಆರ್. ಪುರಂ – ಮಾರತ್‌ಹಳ್ಳಿ – ಇಬ್ಲೂರು, ಸೆಂಟ್ರಲ್ ಸಿಲ್ಕ್ ಬೋರ್ಡ್ – ಜೆ.ಡಿ. ಮರ ಜಂಕ್ಷನ್ – ನಾಯಂಡಹಳ್ಳಿ ಜಂಕ್ಷನ್ – ಕೊಟ್ಟಿಗೆಪಾಳ್ಯ ಜಂಕ್ಷನ್ ಮತ್ತು ಗೊರಗುಂಟೆಪಾಳ್ಯ ಮಾರ್ಗವಾಗಿ |

**ಸಂಚಾರ ದಟ್ಟಣೆ ಉಂಟಾಗುತ್ತಿರುವ 43 ಜಂಕ್ಷನ್‌ಗಳನ್ನಾಗಿ ಗುರುತಿಸಲಾಗಿರುವ ವಿವರಗಳು:–**

| | | | |
|---|---|---|---|
| 1. | ಹೆಬ್ಬಾಳ ಜಂಕ್ಷನ್ | 22. | ಬಾಪೂಜಿ ಜಂಕ್ಷನ್ |
| 2. | ಕೆ.ಆರ್.ಪುರಂ ಜಂಕ್ಷನ್ | 23. | ದೇವೇಗೌಡ ಪೆಟ್ರೋಲ್ ಬಂಕ್ ಜಂಕ್ಷನ್ |
| 3. | ಸಿಲ್ಕ್‌ಬೋರ್ಡ್ ಜಂಕ್ಷನ್ | 24. | ಮಧು ಪೆಟ್ರೋಲ್ ಬಂಕ್ ಜಂಕ್ಷನ್ |
| 4. | ಗೊರಗುಂಟೆಪಾಳ್ಯ ಜಂಕ್ಷನ್ | 25. | ಕದಂಬ ಹೋಟೆಲ್ ಜಂಕ್ಷನ್ |
| 5. | ಎಫ್.ಟಿ.ಐ. ಜಂಕ್ಷನ್ | 26. | ಕೊಡಿಗೇಹಳ್ಳಿ ಜಂಕ್ಷನ್ |
| 6. | ಸಾರಕ್ಕಿ ಜಂಕ್ಷನ್ | 27. | ಬ್ಯಾಟರಾಯನಪುರ ಜಂಕ್ಷನ್ |
| 7. | ಕೆ.ಎಸ್.ಲೇಔಟ್ ಜಂಕ್ಷನ್ | 28. | ಕೆಂಗುಂಟೆ ಸರ್ಕಲ್ |
| 8. | ಕಾಡುಬೀಸನಹಳ್ಳಿ ಜಂಕ್ಷನ್ | 29. | ಎಂ.ಸಿ. ಸರ್ಕಲ್ ವಿಜಯನಗರ |
| 9. | ದೇವರಬೀಸನಹಳ್ಳಿ ಜಂಕ್ಷನ್ | 30. | ಬಿ.ಎಫ್.ಡಬ್ಲ್ಯೂ. ಜಂಕ್ಷನ್ |
| 10. | ಬನಶಂಕರಿ ಬಸ್ ನಿಲ್ದಾಣ | 31. | ಕೋಣನಕುಂಟೆ ಜಂಕ್ಷನ್ |
| 11. | ಜೆ.ಡಿ.ಮರ ಜಂಕ್ಷನ್ | 32. | ತುಳಸಿ ಜಂಕ್ಷನ್ |
| 12. | ಸರ್ಜಾಪುರ ಸೆಂಟ್‌ಜಾನ್ ಸರ್ಕಲ್ | 33. | ಜಾಲಹಳ್ಳಿ ಕ್ರಾಸ್ |
| 13. | ಪೋತಲಪ್ಪ ಗಾರ್ಡನ್(ಆನೇಪಾಳ್ಯ ಜಂಕ್ಷನ್) | 34. | ಎಂ.ಎಸ್. ಪಾಳ್ಯ ಜಂಕ್ಷನ್ |
| 14. | ಸುಮನಹಳ್ಳಿ ಕೆಳಸೇತುವೆ | 35. | ಉದಯ ಟಿ.ವಿ. ಜಂಕ್ಷನ್ |
| 15. | ಒಪೆರಾ ಸರ್ಕಲ್ | 36. | ಬೊಮ್ಮನಹಳ್ಳಿ ಜಂಕ್ಷನ್ |
| 16. | ವಾಟರ್‌ಟ್ಯಾಂಕ್ ಜಂಕ್ಷನ್ | 37. | ಟಿ.ಸಿ. ಪಾಳ್ಯ ಜಂಕ್ಷನ್ |

| | | | |
|---|---|---|---|
| 17. | ಓಕಳಿಪುರಂ ಜಂಕ್ಷನ್ | 38. | ನ್ಯೂಲೈಟ್ ಜಂಕ್ಷನ್ |
| 18. | ಆರ್.ಆರ್.ಎಂ.ಆರ್ ಜಂಕ್ಷನ್ | 39. | ಮೇಕ್ರಿ ಸರ್ಕಲ್ ನಿಂದ ಬಿ.ಡಿ.ಎ ಜಂಕ್ಷನ್ ರಸ್ತೆ ಅಗಲೀಕರಣ |
| 19. | ಇಬ್ಲೂರು ಜಂಕ್ಷನ್ | 40. | ಪೀಣ್ಯ ಎಸ್.ಟಿ.ಟಿ.ಎಫ್. ಜಂಕ್ಷನ್ |
| 20. | ಜಯದೇವ ಫ್ಲೈ ಓವರ್ | 41. | ಮೈಸೂರು ರಸ್ತೆ ಸ್ಯಾಟಿಲೈಟ್ ಬಸ್‌ಸ್ಟ್ಯಾಂಡ್ ಕೆಂಗೇರಿ ಎದುರು |
| 21. | ನಾಯಂಡಹಳ್ಳಿ ಜಂಕ್ಷನ್ | 42. | ಏರ್‌ವ್ಯೂ ಪಾಯಿಂಟ್ ನಿಂದ ಸೋನಿ ವರ್ಲ್ಡ್ ಜಂಕ್ಷನ್ ಕಡೆಗೆ ನಿಂತಿರುವ ಕಾಮಗಾರಿ |
| | | 43. | ಶ್ರೀನಿವಾಗಿಲು ಜಂಕ್ಷನ್ |

ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ವಾಹನಗಳ ಪರಿಣಾಮವಾಗಿ ಸಂಚಾರ ದಟ್ಟಣೆಯು ಸಹ ಹೆಚ್ಚಾಗುತ್ತಿದ್ದು, ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ದಟ್ಟಣೆಯನ್ನು ತಿಳಿಗೊಳಿಸಲು ಬೆಂಗಳೂರು ನಗರ ಸಂಚಾರ ವಿಭಾಗದಿಂದ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತಿರುತ್ತದೆ.

ಬೆಂಗಳೂರು ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಯನ್ನು ನಿವಾರಿಸುವ ಸಲುವಾಗಿ ಈ ಕೆಳಕಂಡ ಉಪಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

❖ ಅತಿ ಹೆಚ್ಚು ಸಂಚಾರ ದಟ್ಟಣೆ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ.

❖ ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧ.

❖ ಬಲ ತಿರುವು ಮತ್ತು "ಯು" ತಿರುವುಗಳ ನಿಷೇಧ.

❖ ಸಂಚಾರ ನಿರ್ವಹಣಾ ಕೇಂದ್ರದ ಸ್ಥಾಪನೆ.

❖ ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಗೃಹರಕ್ಷಕ ಸಿಬ್ಬಂದಿ ಮತ್ತು ಟ್ರಾಫಿಕ್ ವಾರ್ಡನ್‌ಗಳ ತೊಡಗಿಸಿಕೊಳ್ಳುವಿಕೆ.

❖ ಸಿಗ್ನಲ್ ಫ್ರೀ ಕಾರಿಡಾರ್ ವ್ಯವಸ್ಥೆ.

❖ ಮುಕ್ತ ಎಡ ತಿರುವು ವ್ಯವಸ್ಥೆ.

❖ ಸಂಚಾರ ನಿಯಮ ಉಲ್ಲಂಘನೆ ಎಸಗುವವರ ವಿರುದ್ಧ ವಿಶೇಷ ಕಾರ್ಯಾಚಾರಣೆ.

❖ ಪೆಲಿಕಾನ್ ಸಿಗ್ನಲ್ ಲೈಟ್ ಅಳವಡಿಕೆ.

❖ ಸಂಚಾರ ಸೂಚನಾ ಫಲಕಗಳ ಅಳವಡಿಕೆ.

❖ ಪ್ರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದರಿ ರಸ್ತೆಗಳು ಮತ್ತು ಝೀರೋ ಟಾಲರೆನ್ಸ್ ರಸ್ತೆಗಳ ಆಯ್ಕೆ.

❖ ಸಂಚಾರ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ.

❖ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆಗೆದು ವೈಜ್ಞಾನಿಕ ರಸ್ತೆ ಉಬ್ಬುಗಳ ನಿರ್ಮಾಣ.

❖ ಸಂಪರ್ಕ ರಹಿತ ನಿಯಮ ಜಾರಿಗೆ ಹೆಚ್ಚು ಉತ್ತೇಜನ.

❖ ಅಡ್ಡಾದಿಡ್ಡಿ ವಾಹನಗಳ ನಿಲುಗಡೆ ನಿಯಂತ್ರಣ.

❖ ಅತಿವೇಗವಾಗಿ ಚಲಿಸುವ ವಾಹನಗಳಿಗೆ ನಿಯಂತ್ರಣ.

❖ ಅಪಾಯಕಾರಿ ರೀತಿಯಲ್ಲಿ ಚಲಿಸುವ ವಾಹನ ಚಾಲಕ/ಸವಾರರ ವಿರುದ್ಧ ಪರಿಣಾಮಕಾರಿ ಕ್ರಮ.

❖ ಮಧ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ

❖ ವೀಲ್ಹಿಂಗ್ ಮತ್ತು ಡ್ರ್ಯಾಗ್ ರೇಸ್ ಮಾಡುವವರು ವಿರುದ್ಧ ಕಠಿಣ ಕ್ರಮ.

❖ ಗುರುತರ ಸಂಚಾರ ನಿಯಮ ಉಲ್ಲಂಘನೆ ಎಸಗುವ ಚಾಲಕ/ಸವಾರರ ಚಾಲನಾ ಅನುಜ್ಞಾ ಪತ್ರಗಳ ಅಮಾನತ್ತಿಗೆ ಕ್ರಮ.

❖ ಒಟ್ಟು 12 ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳು ಹಾಗೂ 43 ಜಂಕ್ಷನ್‌ಗಳ ಗುರ್ತಿಸುವಿಕೆ.

❖ **ವಾಹನಗಳ ತೆರವು:** ರಸ್ತೆಯಲ್ಲಿ ವಾರಸುದಾರರಿಲ್ಲದೆ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದ ವಾಹನಗಳನ್ನು ತೆರವುಗೊಳಿಸುವ ಕಾರ್ಯವನ್ನು ಬಿ.ಬಿ.ಎಂ.ಪಿ. ರವರ ಸಹಯೋಗದಿಂದ ಕಾರ್ಯಾಚರಣೆಯನ್ನು ಕೈಗೊಂಡಿರುತ್ತದೆ.

ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನ ಸಂಖ್ಯೆಗೆ ಪ್ರಮುಖ ಕಾರಣವಾದ ಆರ್ಥಿಕ ಉದಾರೀಕರಣದ ಪರಿಣಾಮದಿಂದ ಹೊಸ ಬಡಾವಣೆಗಳ ನಿರ್ಮಾಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ, ಮಾಹಿತಿ/ಜೈವಿಕ ತಂತ್ರಜ್ಞಾನ ಸಂಸ್ಥೆಗಳ ಸ್ಥಾಪನೆ ಇವೆಲ್ಲದರ ನೇರ ಪರಿಣಾಮವಾಗಿ ವಾಹನಗಳ ಸಂಚಾರ ಹೆಚ್ಚುತ್ತಲೇ ಇದೆ.

ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳಗೊಂಡಿದ್ದರ ಪರಿಣಾಮ ಅನೇಕ ರೀತಿಯಲ್ಲಿ ಸಂಚಾರ ಸಮಸ್ಯೆಗಳು ಅಂದರೆ ಸಂಚಾರದಲ್ಲಿ ದಟ್ಟಣೆ, ಸುಗಮ ಸಂಚಾರಕ್ಕೆ ಅಡ್ಡಿ, ಸಂಚಾರ ಸ್ಥಗಿತಗಳ ಜೊತೆಗೆ ಅಪಘಾತಗಳ ಹೆಚ್ಚಳಕ್ಕೆ ಕಾರಣವಾಗಿದೆ. ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಘನ ಸರ್ಕಾರವು ಬೆಂಗಳೂರು ನಗರ ಸಂಚಾರ ವ್ಯವಸ್ಥೆಯ ಸುಧಾರಣೆಗೆ ಹತ್ತು ಹಲವು ವಿನೂತನ ಯೋಜನೆಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳುವ ಸಲುವಾಗಿ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅಡಿ ಇರುವ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಸೇರಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಶ್ರಮ ವಹಿಸುತ್ತಿದೆ. ಸರ್ಕಾರದ ಆದೇಶದ ಮೇರೆಗೆ ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಪೂರೈಸಲು ಕೆ.ಆರ್.ಡಿ.ಸಿ.ಎಲ್ ಗೆ ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗುತ್ತಿದೆ.

- **ಸಿ.ಬಿ.ಡಿ ಏರಿಯಾ: (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್)**

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ವಿಧಾನಸೌಧದ ಸುತ್ತ 4 ಚ.ಕಿ.ಮೀ ವ್ಯಾಪ್ತಿಯನ್ನು ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಪ್ರದೇಶವೆಂದು ಈಗಾಗಲೇ

ಘೋಷಿಸಲಾಗಿದೆ. ಈ ವ್ಯಾಪ್ತಿಯಲ್ಲಿ ವಿಧಾನಸೌಧ, ವಿಕಾಸ ಸೌಧ, ಆರ್.ಬಿ.ಐ ಒಳಗೊಂಡಂತೆ ಎತ್ತರದ ಕಟ್ಟಡಗಳು, ಕಾನ್ಸುಲೇಟ್ ಕಛೇರಿಗಳು, ಪ್ರಮುಖ ಹೋಟೆಲ್‌ಗಳು, ಆಸ್ಪತ್ರೆಗಳು, ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು, ಉದ್ಯಾನವನಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಛೇರಿಗಳು, ಕ್ರೀಡಾಂಗಣಗಳು, ಬೆಂಗಳೂರು ಟರ್ಫ್ ಕ್ಲಬ್, ಗಾಲ್ಫ್ ಕ್ಲಬ್ ಇತ್ಯಾದಿಗಳಿರುತ್ತವೆ. ಈ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಪ್ರಾರಂಭದಲ್ಲಿ ನಿರ್ಮಾಣಗೊಂಡ ಸ್ಥಿತಿಯಲ್ಲಿಯೇ ಇದ್ದು ಇವುಗಳ ಅಗಲೀಕರಣದಲ್ಲಿ ಯಾವುದೇ ಬದಲಾವಣೆ ಆಗದೇ ಇರುವುದರಿಂದ ಸಂಚಾರ ದಟ್ಟಣೆ ಉಂಟಾಗಲು ಕಾರಣವಾಗಿರುತ್ತದೆ.

ಸಿ.ಬಿ.ಡಿ. ವ್ಯಾಪ್ತಿ ಪ್ರದೇಶದಲ್ಲಿರುವ ಎಲ್ಲಾ ಜಂಕ್ಷನ್‌ಗಳಲ್ಲಿ ಹೆಚ್ಚಿನ ಸಂಚಾರ ದಟ್ಟಣೆ ಉಂಟಾಗುವ (ಪೀಕ್ ಅವರ್ಸ್ ಮತ್ತು ನಾನ್‌ಪೀಕ್‌ಅವರ್ಸ್) ವೇಳೆಯಲ್ಲಿ ಅಗತ್ಯ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಿಕೊಂಡು, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುತ್ತಿರುತ್ತದೆ.

ಈ ಸಿ.ಬಿ.ಡಿ ಏರಿಯಾಗಳಲ್ಲಿ ಏನೆಲ್ಲಾ ಅಭಿವೃದ್ಧಿ ಕಾರ್ಯಗಳಾಗಬೇಕು ಎಂಬುದರ ಬಗ್ಗೆ ವಿಸ್ತೃತವಾಗಿ ಮಾಹಿತಿಯನ್ನು ಸಿದ್ಧಪಡಿಸಿದ್ದು ಈಗಾಗಲೇ ಸಂಬಂಧಪಟ್ಟ ಪೌರಸಂಸ್ಥೆಗಳು ಮೇಲ್ಕಂಡ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯಪ್ರವೃತಿಗೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

- **ವಿವಿಧ ಪೌರಸಂಸ್ಥೆಗಳ ಮುಖ್ಯಸ್ಥರುಗಳೊಂದಿಗೆ ಸಮನ್ವಯ ಸಮಿತಿಯ ಸಭೆಯನ್ನು ಕೈಗೊಂಡು, ಸಂಚಾರ ದಟ್ಟಣೆಯನ್ನು ನಿವಾರಿಸಲು ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿಯಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಿ,** ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.

- ಸಾರ್ವಜನಿಕರ ಸಂಚಾರದ ನಿಧಾನಗತಿಗೆ ಕಾರಣವಾಗುವ ರಸ್ತೆ ಗುಂಡಿಗಳು, ಮ್ಯಾನ್‌ಹೋಲ್‌ಗಳು, ವಾಟರ್‌ಲಾಗಿಂಗ್ ಸ್ಥಳಗಳು ಇನ್ನೂ ಇತರೆ ಕಾರಣಗಳನ್ನು ಗುರುತಿಸಿ, ಸಂಬಂಧಪಟ್ಟ ಇಲಾಖೆರವರುಗಳಿಂದ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿರುತ್ತದೆ.

- ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆ ಹಾಗೂ ನಿಧಾನಗತಿಗೆ ವಿವಿಧ ಪೌರಸಂಸ್ಥೆಗಳಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಸಹ ಕಾರಣವಾಗಿದ್ದು, ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ ತ್ವರಿತವಾಗಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವ ಕುರಿತು ಮನವಿ ಮಾಡಲಾಗಿರುತ್ತದೆ.

- ಸಂಚಾರ ದಟ್ಟಣೆ/ ಸಮಸ್ಯೆಗಳು ಕಂಡು ಬರುತ್ತಿರುವ ಸ್ಥಳಗಳಲ್ಲಿ ಪರಿವೀಕ್ಷಣೆ ನಡೆಸಿ, ಸುಗಮ ಸಂಚಾರದ ಹಿತದೃಷ್ಟಿಯಿಂದ ನಗರದ ಹಲವಾರು ಸ್ಥಳಗಳಲ್ಲಿ ಬಲ ತಿರುವು ಹಾಗೂ ಯು-ತಿರುವುಗಳನ್ನು ನಿರ್ಬಂಧಿಸಲಾಗಿದೆ.

- ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿನ ಹೆಚ್ಚು ಸಂಚಾರ ದಟ್ಟಣೆ ಇರುವ ಪ್ರದೇಶಗಳನ್ನು ಗುರುತಿಸಿ, ರಸ್ತೆ ಅಗಲಪಿದ್ದು ಮುಕ್ತ ಎಡ

| | | |
|---|---|---|
| | | ತಿರುವು ಇರುವ ಕಡೆಗಳಲ್ಲಿ ಸಂಚಾರ ಪರಿಕರಗಳನ್ನು ಅಳವಡಿಸಿ ಪಥಶಿಸ್ತು ಚಾಲನೆಯನ್ನು ಜಾರಿ ಮಾಡಿದ ಕಾರಣ, ನಿರೀಕ್ಷೆಗೂ ಮೀರಿ ಅಪಘಾತಗಳ ಸಂಖ್ಯೆಯು ಇಳಿಮುಖವಾಗುವುದಕ್ಕೆ ಕಾರಣವಾಗಿರುತ್ತದೆ ಹಾಗೂ ಸಂಚಾರವೂ ಸಹ ಸುಗಮಗೊಂಡಿರುತ್ತದೆ.<br>▪ ಬೆಂಗಳೂರು ನಗರದ 107 ಪ್ರಮುಖ ರಸ್ತೆಗಳನ್ನು ಗುರುತಿಸಿ, ಝೀರೋ ಟಾಲರೆನ್ಸ್ ರಸ್ತೆ ಎಂಬುದಾಗಿ ಜಾರಿ ಮಾಡಲಾಗಿರುತ್ತದೆ. ಅಂತಹ ರಸ್ತೆಗಳಲ್ಲಿ ಯಾವುದೇ ರೀತಿಯ ಅನಧಿಕೃತ ವಾಹನ ನಿಲುಗಡೆ, ತಪ್ಪು ವಾಹನ ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳಾಗಂತೆ ಸಂಚಾರ ಅಧಿಕಾರಿಗಳ ಗಸ್ತುಗಳನ್ನು ಏರ್ಪಡಿಸಲಾಗಿರುತ್ತದೆ.<br>**▪ ಬೆಂಗಳೂರು ನಗರದ ರಸ್ತೆಗಳಲ್ಲಿ ಭಾರೀ ಸರಕು ಸಾಗಣೆ ವಾಹನಗಳಿಂದ ಸಂಚಾರ ಸಮಸ್ಯೆಗಳು ಕಂಡು ಬಂದಿದ್ದ ಕಾರಣ ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳು ಬೆಳಗ್ಗೆ 11-00 ಗಂಟೆಯಿಂದ ಸಂಜೆ 04-00 ಗಂಟೆಯವರೆಗೆ ಹಾಗೂ ರಾತ್ರಿ 10-00 ಗಂಟೆಯಿಂದ ಬೆಳಗ್ಗೆ 07-00 ಗಂಟೆಯವರೆಗೆ ಮಾತ್ರ ಸಂಚರಿಸುವಂತೆ ಹಾಗೂ ಬೆಳಗ್ಗೆ 07-00 ಗಂಟೆಯಿಂದ 11-00 ಗಂಟೆಯವರೆಗೆ ಹಾಗೂ ಸಂಜೆ 04-00 ಗಂಟೆಯಿಂದ ರಾತ್ರಿ 10-00 ಗಂಟೆಯವರೆಗೆ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.**<br>▪ ಹೆಚ್ಚಿನ ಸಂಚಾರ ದಟ್ಟಣೆ ಉಂಟಾಗುವ ವೇಳೆ (ಪೀಕ್ ಅವರ್ಸ್) ಗಳಲ್ಲಿ ಬೆಂಗಳೂರು ನಗರದ ಎಲ್ಲಾ ಜಂಕ್ಷನ್ ಮತ್ತು ರಸ್ತೆಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುತ್ತಾರೆ.<br>▪ ಪ್ರತಿಯೊಂದು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದೊಂದು ಪ್ರಮುಖ ರಸ್ತೆಗಳನ್ನು ಗುರುತಿಸಿ ಮಾದರಿ ರಸ್ತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ ಹಾಗೂ ಇಂತಹ ಮಾದರಿ ರಸ್ತೆಗಳಲ್ಲಿ ಯಾವುದೇ ರೀತಿಯ ಸಂಚಾರ ಸಮಸ್ಯೆಗಳು ಸಂಭವಿಸದಂತೆ ಹಾಗೂ ರಸ್ತೆ ಸುರಕ್ಷತೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆ.<br>▪ ಬೆಂಗಳೂರು ನಗರದಾದ್ಯಂತ ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಿರ್ಮಿಸಲಾಗಿದ್ದ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲಾಗಿದೆ. ಪ್ರಮುಖ ರಸ್ತೆಗಳಲ್ಲಿ ವಾಹನದ ವೇಗವನ್ನು ನಿಯಂತ್ರಿಸಿ ಅಪಘಾತಗಳನ್ನು ತಡೆಯುವ ಸಲುವಾಗಿ ಹಾಗೂ ಅವಶ್ಯಕವಿರುವ ಸ್ಥಳಗಳಲ್ಲಿ ಮಾತ್ರವೇ ಐ.ಅರ್.ಸಿ (Indian Road Congress) ಮಾದರಿಯಲ್ಲಿ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದೆ.<br>▪ ಪ್ರತಿ ಸಂಚಾರ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ ಎರಡನೇ ಶನಿವಾರಗಳಂದು ನಾಗರೀಕ ಸಂಚಾರ ವೇದಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಆಯಾ ಸಂಚಾರ ಠಾಣಾ ವ್ಯಾಪ್ತಿಯ ನಾಗರೀಕರು ತಮ್ಮ ಸಂಚಾರ ಸಮಸ್ಯೆಗಳನ್ನು ಠಾಣಾ ಮಟ್ಟದಲ್ಲಿ ಪರಿಹರಿಸಿಕೊಳ್ಳುವ ವೇದಿಕೆಯನ್ನು ಸೃಜಿಸಲಾಗಿದೆ. |

| | | |
|---|---|---|
| | | ▪ ಬೆಂಗಳೂರು ನಗರದಲ್ಲಿ ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸುಗಮ ಸಂಚಾರ ಜಾರಿ ಮಾಡಲು ಮತ್ತು ರಸ್ತೆಯಲ್ಲಿ ಸುರಕ್ಷತೆಯನ್ನು ಜಾರಿ ಮಾಡಲು ಹಲವಾರು ಕ್ರಮಗಳನ್ನು, ಆಂದೋಲನಗಳನ್ನು ಹಾಗೂ ವೃತ್ತಿಪರ ಚಾಲಕರುಗಳಿಗೆ ಹಲವಾರು ತರಬೇತಿ ಹಾಗೂ ರಸ್ತೆ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ರಸ್ತೆ ಸುರಕ್ಷತೆಯನ್ನು ಅತ್ಯುತ್ತಮ ರೀತಿಯಲ್ಲಿ ಜಾರಿ ಮಾಡಲಾಗಿದೆ.<br><br>▪ ನಗರದ ರಸ್ತೆಗಳಲ್ಲಿ ಸಂಚಾರ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿರುವ ವಾಹನಗಳ ಅನಧಿಕೃತ, ತಪ್ಪು ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.<br><br>▪ ಪಾದಚಾರಿಗಳ ಸುರಕ್ಷತಾ ದೃಷ್ಟಿಯಿಂದ ಜೀಬ್ರಾ ಕ್ರಾಸಿಂಗ್ ನಿರ್ಮಿಸಿ, ನಿಗಧಿತ ಸ್ಥಳದಲ್ಲಿ ಪಾದಚಾರಿಗಳು ರಸ್ತೆಗಳನ್ನು ದಾಟಲು ಅನುವು ಮಾಡಿಕೊಡಲಾಗಿದೆ.<br><br>▪ ಬೆಂಗಳೂರು ನಗರ ರಸ್ತೆಗಳಲ್ಲಿ ಪಥ ಶಿಸ್ತು ಚಾಲನೆಯ ನಿಯಮಗಳನ್ನು ಉಲ್ಲಂಘಿಸುವ ವಾಹನ ಚಾಲಕರುಗಳಿಗೆ ಕಠಿಣ ನಿಯಮಗಳ ಜಾರಿಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>▪ ಸಂಚಾರ ನಿರ್ವಹಣಾ ಕೇಂದ್ರವು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮರಾದ ಮೂಲಕ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಅಳವಡಿಸಲಾಗಿರುವ ವಿಡಿಯೋವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. 19 ಕಾರಿಡಾರ್‌ಗಳಲ್ಲಿ ಎರಡು ಪಾಳಿಯಲ್ಲಿ ನಿತ್ಯ ಕ್ಯಾಮರಾ ವೀಕ್ಷಿಸಿ ಜಂಕ್ಷನ್‌ಗಳಲ್ಲಿನ ಸಂಚಾರದ ದಟ್ಟಣೆಯನ್ನು ಪರಿಶೀಲಿಸಿ, ಸಿಗ್ನಲ್ ಲೈಟ್‌ನ ಸಮಯವನ್ನು ಸಂಚಾರ ನಿರ್ವಹಣಾ ಕೇಂದ್ರದಿಂದಲೇ ಬದಲಾವಣೆ ಮಾಡುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬೆಂಗಳೂರು ನಗರ ಸಂಚಾರ ವಿಭಾಗದ ಪೊಲೀಸ್ ವೆಬ್‌ಸೈಟ್ ಅನ್ನು ಪ್ರತಿನಿತ್ಯ ಸಮಗ್ರ ಮಾಹಿತಿಗಳೊಂದಿಗೆ ಇಲ್ಲಿಯೇ ಅಪ್‌ಡೇಟ್ ಮಾಡಲಾಗುತ್ತಿರುತ್ತದೆ ಹಾಗೂ ನಗರದಲ್ಲಿ ಅಳವಡಿಸಲಾಗಿರುವ ಸಿಗ್ನಲ್ ಲೈಟ್, ವೀಡಿಯೋ ಮ್ಯಾನೇಜ್‌ಮೆಂಟ್ ಸಿಸ್ಟಮ್, ಸರ್ವಿಲನ್ಸ್ ಕ್ಯಾಮರಾ ಇನ್ನಿತರೆ ತಾಂತ್ರಿಕ ಉಪಕರಣಗಳ ನಿಯಂತ್ರಣವನ್ನು ಮಾಡಬಹುದಲ್ಲದೆ, ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡುವ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.<br><br>▪ ಬೆಂಗಳೂರು ನಗರ ಸಂಚಾರ ಪೊಲೀಸ್ ಘಟಕವು ತಂತ್ರಜ್ಞಾನದ ಬಳಕೆ ಹಾಗೂ ಸಂಯೋಜನೆಗಳನ್ನು ಪೊಲೀಸ್ ಕಾರ್ಯಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳುವ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಅಂತಹ ಹಲವು ತಂತ್ರಜ್ಞಾನಗಳಲ್ಲಿ **ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ** ಕೂಡ |

| | | |
|---|---|---|
| | | ಒಂದಾಗಿರುತ್ತದೆ. ಈ ವ್ಯವಸ್ಥೆಯನ್ನು ಡಿಸೆಂಬರ್–2022 ರಿಂದ ನಗರದ ಪ್ರಮುಖ 50 ಜಂಕ್ಷನ್‌ಗಳಲ್ಲಿ ಜಾರಿಗೆ ತರಲಾಗಿದ್ದು, ಒಟ್ಟು 250 ಎ.ಎನ್.ಪಿ.ಆರ್. ಹಾಗೂ 80 ಆರ್.ಎಲ್.ವಿ.ಡಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ. ಈ ವ್ಯವಸ್ಥೆಯು ಸಂಪರ್ಕರಹಿತ ಸ್ವಯಂಚಾಲಿತ ಸಂಚಾರ ಉಲ್ಲಂಘನೆ ಜಾರಿಗಾಗಿ ಇರುವ ಉತ್ತಮ ವ್ಯವಸ್ಥೆಯಾಗಿರುತ್ತದೆ.<br>▪ ಬಿ–ಟ್ರ್ಯಾಕ್ ಯೋಜನೆ ಅಡಿಯಲ್ಲಿ ರಸ್ತೆಗಳ ಮೇಲೆ ಲೇನ್ ಮಾರ್ಕಿಂಗ್ ಪೇಯಿಂಟ್ ಮಾಡುವುದರ ಮುಖಾಂತರ ಶಿಸ್ತು ಪಥ ಚಾಲನೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>▪ ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಸಾರ್ವಜನಿಕರಿಗೆ ಸಂಚಾರ ದಟ್ಟಣೆ ಉಂಟಾಗಿರುವ ಮಾರ್ಗಗಳ ಬಗ್ಗೆ ಮಾಹಿತಿಯನ್ನು ಬಳಸಬಹುದಾದ ಪರ್ಯಾಯ ಮಾರ್ಗಗಳ ಕುರಿತು ಮಾಹಿತಿಯನ್ನು ವಿನಿಮಯ ಮಾಡಲಾಗುತ್ತಿರುತ್ತದೆ.<br>▪ ದೈನಂದಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಭಿತ್ತಿ ಚಿತ್ರಗಳನ್ನು ಹಾಗೂ ಛಾಯಾ ಚಿತ್ರಗಳನ್ನು ಮುದ್ರಿಸಿ ಮತ್ತು ಆಂದೋಲನಗಳ ಮುಖೇನ ಪಥ ಶಿಸ್ತು ಪಾಲನೆಯ ಗುರಿ ಮತ್ತು ಉದ್ದೇಶಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲಾಗುತ್ತಿದೆ.<br>▪ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರತಿದಿನ ವಿದ್ಯಾರ್ಥಿಗಳು, ಪೋಷಕರು, ಆಟೋರಿಕ್ಷಾ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ಕ್ಯಾಬ್ ಚಾಲಕರುಗಳು ವೀಕ್ಷಣೆಗೆ ಬರುತ್ತಿದ್ದು ಅವರುಗಳಿಗೆ ಶಿಸ್ತು ಪಥ ಪಾಲನೆ ಬಗ್ಗೆ ವಿಡಿಯೋ ತುಣುಕುಗಳನ್ನು ತೋರಿಸುವುದರ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.<br>▪ ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿಯೂ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸಲಾಗುತ್ತಿದೆ.<br>▪ ನಗರದಲ್ಲಿ ಪ್ರಮುಖ ವೃತ್ತ / ಸ್ಥಳಗಳನ್ನು ಗುರುತಿಸಿ ಅಗತ್ಯವಿರುವ ಒಟ್ಟು 388 ಸ್ಥಳಗಳಲ್ಲಿ ಸಂಚಾರ ಸಿಗ್ನಲ್ ದೀಪಗಳ ಅಳವಡಿಕೆ. 35 ಸ್ಥಳಗಳಲ್ಲಿ ಅಡಾಪ್ಟೀವ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.<br>▪ ಸಂಚಾರ ಪೊಲೀಸ್ ಕರ್ತವ್ಯಗಳಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಲು 800ಕ್ಕೂ ಹೆಚ್ಚು ಸ್ವಯಂ ಇಚ್ಛೆಯಿಂದ ಟ್ರಾಫಿಕ್ ವಾರ್ಡನ್‌ಗಳಾಗಿ ಸೇವೆ ಸಲ್ಲಿಸಲು ಮುಂದೆ ಬಂದಿರುವ ಯುವಕರನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.<br>▪ ಸಂಚಾರ ದಟ್ಟಣೆಯನ್ನು ತಿಳಿಗೊಳಿಸಲು ಸಂಚಾರ ಪೊಲೀಸರಿಗೆ ಪೂರಕವಾಗಿ ಕರ್ತವ್ಯ ನಿರ್ವಹಿಸಲು ಈಗಾಗಲೇ ಹೋಂಗಾರ್ಡ್‌ಗಳ ಸೇವೆಯನ್ನು ಬಳಸಿಕೊಳ್ಳಲಾಗಿದ್ದು, ಎಲ್ಲಾ ಹೋಂಗಾರ್ಡ್‌ಗಳನ್ನು ಅತಿ ಹೆಚ್ಚು ದಟ್ಟಣೆಯಿರುವ ಜಂಕ್ಷನ್‌ಗಳಿಗೆ ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ ಹಾಗೂ ಹೆಚ್ಚುವರಿಯಾಗಿ 200 ಹೋಂಗಾರ್ಡ್‌ಗಳನ್ನು ಬಿ.ಬಿ.ಎಂ.ಪಿ. ವತಿಯಿಂದ ಪಡೆಯಲಾಗಿದ್ದು, |

| | | |
|---|---|---|
| | | ಸದರಿಯವರುಗಳನ್ನು ಹೊರವರ್ತುಲ ರಸ್ತೆಗಳಲ್ಲಿ ಉಂಟಾಗುವ ಸಂಚಾರ ದಟ್ಟಣೆಯನ್ನು ತಿಳಿಗೊಳಿಸಲು ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ. |
| ಇ) | ಬೆಂಗಳೂರು ನಗರದಲ್ಲಿ ಜಪಾನ್ ದೇಶದ ಸಹಯೋಗದೊಂದಿಗೆ ಹಾಗೂ ಬೆಂಗಳೂರು ನಗರದಲ್ಲಿ ಐ.ಎಸ್.ಇ.ಸಿ. ಸಂಸ್ಥೆ ಸಲಹೆಯೊಂದಿಗೆ ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆಯೇ;<br>ಹಾಗಿದ್ದಲ್ಲಿ, ಈ ಯೋಜನೆಗಳ ರೂಪುರೇಷೆಗಳೇನು ಮತ್ತು ಯೋಜನೆಗಳ ಅನುಷ್ಠಾನ ಯಾವ ಹಂತದಲ್ಲಿದೇ? (ಪೂರ್ಣ ಮಾಹಿತಿ ನೀಡುವುದು). | 1. **ಜಪಾನ್ ಸಂಸ್ಥೆಯ ಸಹಯೋಗದೊಂದಿಗೆ ಕೈಗೊಂಡಿರುವ ಯೋಜನೆ:** ನಗರ ಭೂ ಸಾರಿಗೆ ನಿರ್ದೇಶನಾಲಯವು(Directorate of Urban and Land Transport, Urban Development Department) ಬೆಂಗಳೂರಿನ ಕೆಲವು ಭಾಗಗಳಲ್ಲಿ ಮುಂಗಡ ಸಂಚಾರ ಮಾಹಿತಿ ಮತ್ತು ನಿರ್ವಹಣಾ ವ್ಯವಸ್ಥೆಯನ್ನು Adavanced Traffic Information and Management system (ATIMS) ಜಪಾನ್ ಸರ್ಕಾರದ ಸಹಯೋಗದ ಮೂಲಕ ಅನುಷ್ಠಾನಗೊಳಿಸುತ್ತಿರುತ್ತಾರೆ.<br><br>2. **ಐ.ಎಸ್.ಇ.ಸಿ. ಸಂಸ್ಥೆಯ ಸಲಹೆಯೊಂದಿಗೆ ಕೈಗೊಂಡಿರುವ ಯೋಜನೆ :**<br>▪ ಐ.ಎಸ್.ಇ.ಸಿ. ಸಂಸ್ಥೆಯವರು ಸಿಲ್ಕ್‌ಬೋರ್ಡ್ ಜಂಕ್ಷನ್, ಗೊರಗುಂಟೆಪಾಳ್ಯ ಜಂಕ್ಷನ್, ಟಿನ್ ಫ್ಯಾಕ್ಟರಿ ಜಂಕ್ಷನ್, ಹೆಬ್ಬಾಳ ಜಂಕ್ಷನ್, ಸಾರಕ್ಕಿ ಜಂಕ್ಷನ್ ಬನಶಂಕರಿ ಜಂಕ್ಷನ್, ಕುಮಾರಸ್ವಾಮಿ ಲೇಔಟ್ ಜಂಕ್ಷನ್, ಇಬ್ಬಲೂರು ಜಂಕ್ಷನ್, ಕಾಡುಬೀಸನಹಳ್ಳಿ ಜಂಕ್ಷನ್ ಡ್ಯೆರಿ ಸರ್ಕಲ್‌ಗಳಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಯ ನಿವಾರಣೆಗೆ ಸಲಹೆಗಳನ್ನು ನೀಡಿರುತ್ತಾರೆ.<br>▪ ಐ.ಎಸ್.ಇ.ಸಿ. ಸಂಸ್ಥೆಯವರು ನೀಡಿರುವ ಸಲಹೆಗಳ ಪರಿಶೀಲನಾ ಕಾರ್ಯ ಪ್ರಾರಂಭಿಕ ಹಂತದಲ್ಲಿದ್ದು, ಪ್ರಾಯೋಗಿಕವಾಗಿ ಸಂಚಾರ ದಟ್ಟಣೆ ನಿವಾರಣೆಗೆ ಅನುಕೂಲವಾದಲ್ಲಿ, ಸದರಿಯವರ ಸಲಹೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. |

ಹೆಚ್‌ಡಿ 514 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

# ಅನುಬಂಧ

| ಕ್ರ ಸಂ. | ವಾಹನಗಳ ವಿವರ | 31-03-2015 | 31-03-2016 | 31-03-2017 | 31-03-2018 | 31-03-2019 | 31-03-2020 | 31-03-2021 | 31-03-2022 | 31-03-2023 |
|---|---|---|---|---|---|---|---|---|---|---|
| | ಸಾರಿಗೇತರ ವಾಹನ | | | | | | | | | |
| 1 | ದ್ವಿ ಚಕ್ರ ವಾಹನ | 4179466 | 4584405 | 5017702 | 5435687 | 5889518 | 6298589 | 6550155 | 6803287 | 7355292 |
| 2 | ಕಾರುಗಳು | 1420092 | 1526483 | 1640954 | 1755715 | 1865918 | 1966974 | 2062333 | 2173442 | 2354055 |
| 3 | ಆಮ್ನಿ ಬಸ್ಸುಗಳು | 4615 | 4677 | 4720 | 4749 | 4769 | 4800 | 4809 | 4817 | 5013 |
| 4 | ಟ್ರ್ಯಾಕ್ಟರ್‌ಗಳು | 24448 | 25151 | 26003 | 26986 | 28239 | 29997 | 31575 | 32122 | 37657 |
| 5 | ಟ್ರೈಲರ್‌ಗಳು | 7844 | 8319 | 8783 | 9398 | 10171 | 11109 | 11216 | 11468 | 14677 |
| 6 | ನಿರ್ಮಾಣ ಸಾಮಗ್ರಿ ವಾಹನ | 461 | 488 | 538 | 625 | 821 | 1477 | 2017 | 2553 | 3595 |
| 7 | ಖಾಸಗಿ ಸೇವಾ ವಾಹನ | 39 | 40 | 41 | 41 | 167 | 417 | 428 | 445 | 473 |
| 8 | ಇತರೆ ವಾಹನ | 22628 | 24205 | 26255 | 28951 | 30831 | 33148 | 35600 | 38571 | 43148 |
| | **ಒಟ್ಟು ಸಾರಿಗೇತರ ವಾಹನ (ಎ)** | **5659593** | **6173768** | **6724996** | **7262152** | **7830433** | **8346482** | **8698133** | **9066705** | **9813910** |
| 9 | ಸರಕು ವಾಹನ | | | | | | | | | |
| ಅ | ಮಲ್ಟಿ ಆಕ್ಸಲ್ಡ್ /ಆರ್ಟಿಕ್ಯುಲೇಟೆಡ್ ವಾಹನ | 9758 | 10703 | 12205 | 14169 | 14750 | 15044 | 15101 | 15299 | 15692 |
| ಆ | ಟ್ರಕ್ಸ್ ಮತ್ತು ಲಾರಿಗಳು | 139082 | 144006 | 149269 | 153733 | 161077 | 166982 | 169529 | 174204 | 185269 |
| | **ಒಟ್ಟು** | **148840** | **154709** | **161474** | **167902** | **175827** | **182026** | **184630** | **189503** | **200961** |

| | | | | | | | | | | |
|---|---|---|---|---|---|---|---|---|---|---|
| 10 | ಲಘು ಸರಕು ವಾಹನ | | | | | | | | | |
| ಅ | ನಾಲ್ಕು ಚಕ್ರಗಳ ವಾಹನ | 115738 | 123866 | 131168 | 139523 | 150848 | 161752 | 167405 | 174880 | 191683 |
| ಆ | ಮೂರು ಚಕ್ರಗಳ ವಾಹನ | 45391 | 47575 | 50152 | 52673 | 56332 | 59880 | 61821 | 64536 | 69105 |
| | ಒಟ್ಟು | **161129** | **171441** | **181320** | **192196** | **207180** | **221632** | **229226** | **239416** | **260788** |
| 11 | ಬಸ್ಸುಗಳು | 94007 | 97462 | 100896 | 104469 | 111542 | 115489 | 115876 | 116885 | 121224 |
| | ಒಟ್ಟು | **94007** | **97462** | **100896** | **104469** | **111542** | **115489** | **115876** | **116885** | **121224** |
| 12 | ಟ್ಯಾಕ್ಸಿಗಳು | | | | | | | | | |
| ಅ | ಮೋಟಾರು ಕ್ಯಾಬ್ | 105003 | 129052 | 155801 | 169013 | 182834 | 194780 | 195873 | 197497 | 208673 |
| ಆ | ಮ್ಯಾಕ್ಸಿ ಕ್ಯಾಬ್ | 40324 | 43695 | 46650 | 48831 | 51378 | 54029 | 54137 | 54256 | 56293 |
| ಇ | ಇತರೆ ಕ್ಯಾಬ್‌ಗಳು | 10 | 12 | 17 | 18 | 18 | 36 | 130 | 130 | 130 |
| | ಒಟ್ಟು | **145337** | **172759** | **202468** | **217862** | **234230** | **248845** | **250140** | **251883** | **265096** |
| 13 | ಲಘು ಪ್ರಯಾಣಿಕರ ವಾಹನ | | | | | | | | | |
| ಅ | 3 ಆಸನಗಳ ವಾಹನ | 214938 | 227449 | 237975 | 250082 | 269756 | 286871 | 288108 | 289566 | 301645 |
| 14 | ಇತರೆ ವಾಹನ | 16328 | 17094 | 18979 | 21535 | 38964 | 69393 | 72043 | 76527 | 84913 |
| | ಒಟ್ಟು | **231266** | **244543** | **256954** | **271617** | **308720** | **356264** | **360151** | **366093** | **386558** |
| | ಒಟ್ಟು ಸಾರಿಗೆ ವಾಹನ (ಬಿ) | **780579** | **840914** | **903112** | **954046** | **1037499** | **1124256** | **1140023** | **1163780** | **1234627** |
| | ಒಟ್ಟು (ಸಾರಿಗೆ+ಸಾರಿಗೇತರ) (ಎ+ಬಿ) | **6440172** | **7014682** | **7628108** | **8216198** | **8867933** | **9470767** | **9838156** | **10230485** | **11048537** |